# ಕರಡಿ ಕಲಿಸಿದ ಪಾಠ

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು

ಬಿಂದು ಎಂಬ ಬೇಡನ ಹೆಂಡತಿ ತನಗೆ ಒಂದು ಮೊಲದ ಮರಿ ತಂದು ಕೊಡುವಂತೆ ಹಟ ಹಿಡಿದಿದ್ದಳು. ಅದಕ್ಕೆ 'ಆಯ್ತು' ಎಂದ ಬೇಡ, ಮೊಲ ಹಿಡಿಯುವ ಬಲೆಯೊಂದಿಗೆ ಹತ್ತಿರದ ಕಾಡಿನೊಳಗೆ ನುಗ್ಗಿದ. ಸುಮಾರು ಎರಡು ಗಂಟೆಗಳ ಕಾಲ ಎಲ್ಲೆಲ್ಲೂ ಸುತ್ತಿದರೂ ಆತನಿಗೆ ಮೊಲದ ಸುಳಿವು ದೊರೆಯಲಿಲ್ಲ. ಹತಾಶನಾದ ಬೇಡ, ಮನೆಗೆ ವಾಪಸ್ ಬರುತ್ತಿದ್ದಾಗ, ದೂರದ ಮಾವಿನ ಮರದ ಕೆಳಗಿದ್ದ ಪೊಟರೆಯ ಎದುರು ಎರಡು ಮುದ್ದಾದ ಮೊಲದ ಮರಿಗಳು ಆನಂದದಿಂದ ಆಡುತ್ತಿರುವುದನ್ನು ಗಮನಿಸಿದ. ಮನದೊಳಗೆ ಖುಷಿಪಡುತ್ತ ಮೆಲ್ಲಗೆ ಆ ಮರದ ಬಳಿ ಹೋಗಿ, ಬಲೆ ಹಾಸಿ ಎರಡು ಮೊಲದ ಮರಿಗಳ ಪೈಕಿ ಒಂದನ್ನು ಹಿಡಿದು ಸಂತಸದಿಂದ ಮನೆಯತ್ತ ಹೊರಟು ಹೋದ. ಈ ದೃಶ್ಯವನ್ನು ಅದೇ ಮರದ ಮೇಲೆ ಕುಳಿತ ಒಂದು ಮಂಗ ಸದ್ದಿಲ್ಲದೇ ನೋಡುತ್ತ ಮನದಲ್ಲಿ ಛೇ.. ಪಾಪ ಎಂದು ಮರಗುತ್ತ ಈ ವಿಷಯ ಆ ಮೊಲದ ತಾಯಿಗೆ ತಿಳಿಸಲು ಛಂಗನೆ ಹಾರುತ್ತ, ಮರಿಗಳಿಗೆ ಆಹಾರ ತರುತ್ತಿದ್ದ ಆ ಮೊಲದ ತಾಯಿಗೆ ತಿಳಿಸಿತು.

ಆ ಸುದ್ದಿ ಕೇಳಿದಾಕ್ಷಣ ಗಾಬರಿಗೊಂಡ ಆ ಮೊಲ, ತನ್ನ ಕೈಯಲ್ಲಿದ್ದ ಆಹಾರವನ್ನು ಅಲ್ಲಿಯೇ ಚೆಲ್ಲಿ ಎದೆ ಬಡಿದುಕೊಳ್ಳುತ್ತ ಅಯ್ಯೋ... ನನ್ನ ಕಂದಾ ಎಂದು ರೋದಿಸತೊಡಗಿತು. ಅದರ ಸಂಕಟ ಕಂಡ ಮಂಗಣ್ಣ 'ಅಕ್ಕಾ... ನೀನೇನು ಯೋಚನೆ ಮಾಡಬೇಡ. ನಾನು ಈಗಲೇ ಕರಡಿ ಮಾಮನ ಬಳಿ ಹೋಗಿ, ಆತನ ಸಹಾಯ ಪಡೆದು ನಿನ್ನ ಮರಿಯನ್ನು ವಾಪಸ್ ಬರುವಂತೆ ಮಾಡುತ್ತೇನೆ. ಈಗ ಈ ಆಹಾರ ತೆಗೆದುಕೊಂಡು ಹೋಗು, ಪೊಟರೆಯಲ್ಲಿ ಇನ್ನೊಂದು ಮರಿ ಗಾಬರಿಯಾಗಿ ಕುಳಿತಿದೆ ಎಂದು ಹೇಳಿ ಅದು ಕರಡಿ ಮಾಮನನ್ನು ಹುಡುಕಿಕೊಂಡು ಹೊರಟು ಹೋಯಿತು. ಮಂಗಣ್ಣನ ಮಾತು ಆಲಿಸಿದ ಮೊಲ, ತಾನು ತಂದಿದ್ದ ಆಹಾರ ಹೊತ್ತುಕೊಂಡು ಪೊಟರೆಯತ್ತ ಬಂದಿತು.

ಇತ್ತ ಕರಡಿಯನ್ನು ಹುಡುಕಲು ಮಂಗಣ್ಣ ಟೊಂಗೆಯಿಂದ ಟೊಂಗೆಗೆ ಹಾರುತ್ತ ಅಂತೂ ಕರಡಿ ಮಾಮ ಇರುವಲ್ಲಿಗೆ ಬಂದಿತು. ಆಗ ಅದೇ ತಾನೆ ಹೊಟ್ಟೆ ತುಂಬ ಹಲಸಿನ ಹಣ್ಣು ತಿಂದು ತೂಕಡಿಸುತ್ತ ಕುಳಿತಿದ್ದ ಆ ಕರಡಿ ಮಂಗಣ್ಣನನ್ನು ಕಂಡು 'ಯಾಕೆ ಮಂಗಣ್ಣ ಏನು ಸಮಾಚಾರ?' ಎಂದು ಕೇಳಿದಾಗ ಮಂಗಣ್ಣ ಅದಕ್ಕೆ ನಡೆದ ವಿಚಾರ ಬಿಡಿಬಿಡಿ ಯಾಗಿ ಹೇಳಿ 'ಹೇಗಾದರೂ ಸರಿ ಆ ಮೊಲದ ಮರಿ ಅದರ ತಾಯಿಯನ್ನು ಸೇರುವಂತೆ ಮಾಡಬೇಕು' ಎಂದು ಕೇಳಿಕೊಂಡಿತು. ಮಂಗಣ್ಣನ ಮಾತು ಆಲಿಸಿದ ಕರಡಿ 'ನಿನಗೆ ಆ ಬೇಡನ ಮನೆ ಗೊತ್ತಾ?' ಎಂದು ಪ್ರಶ್ನಿಸಿದಾಗ ಅದು 'ಹೋ... ಗೊತ್ತು, ಅಲ್ಲಿಗೆ ನಿನ್ನನು ನಾನು





## ಎರಡು ಕವಿತೆಗಳು

■ ರಾಜಶೇಖರ ಕುಕ್ಕುಂದಾ

## ನಿದ್ದೆ ಎಲ್ಲಿ ಇರುವುದು?

ನಿದ್ದೆ ಎಲ್ಲಿ ಇರುವುದು?
ಎದ್ದು ಓಡಿ ಬರುವುದು!

ಕಣ್ಣು ಮುಚ್ಚಿ ಕೂತರದುವೆ
ಕಣ್ಣಿಗೊತ್ತಿ ಬರುವುದು
ಬೆನ್ನು ಹಚ್ಚಿ ಕೂತರದುವೆ
ಬೆನ್ನಿಗೊತ್ತಿ ಬರುವುದು

ಹೊತ್ತಿಲ್ಲದ ವೇಳೆಯಲ್ಲಿ
ಸುತ್ತಿ ಸುತ್ತಿ ಬರುವುದು
ಹೊತ್ತು ಗೊತ್ತು ಇಲ್ಲದೆಯೆ
ಮೈಗೆ ಮುತ್ತುತಿರುವುದು

ಕ್ಲಾಸಿನಲ್ಲಿ ಕಾಡಲಿಕ್ಕೆ
ಧುತ್ತನೆಂದು ಬರುವುದು
ಪಾಠ ಕೇಳುವಾಗ ತನ್ನ
ಆಟ ನಡೆಸುತಿರುವುದು!

ಹಗಲಿನಲ್ಲು ಚಂದ್ರ–ತಾರೆ
ಗಳನು ತೋರಿಬಿಡುವುದು
ಸಿನೆಮದಂತೆ ಕನಸುಗಳನು
ತಲೆಗೆ ತೂರಿಬಿಡುವುದು

ಆಕಳಿಸಿದರೂ ಹೋಗದು
ತೂಕಡಿಸಿದರೂ ಹೋಗದು
ಬೈಗುಳಕ್ಕೂ ಬಗ್ಗದು
ತಣ್ಣೀರಿಗೂ ಜಗ್ಗದು

ಹೇಳಿ ಏನು ಮಾಡುವುದು?
ಹೇಳಿ ಏನು ಮಾಡುವುದು?

■

ಕಲೆ: ಸಂತೋಷ್ ಸಸಿಹಿತ್ಲು